

# ‘ನೋ ಐಟಂ’ ಸಾಂಗ್

ಐಟಂ ಸಾಂಗ್‌ನ ಹೊಸ ಕ್ರೇಜ್ ಬಾಲಿವುಡ್‌ನಲ್ಲಿ ಅಬಾಧಿತವಾಗಿ ಮುಂದುವರಿದಿದೆ. ‘ಮುನ್ನಿ..’ ಮತ್ತು ‘ಶೀಲಾ..’ ಹಾಡುಗಳು ಯುವಜನರಲ್ಲಿ ಉಂಟು ಮಾಡಿದ ಸಂಚಲನ ಇಡೀ ಚಿತ್ರದ ಬಾಕ್ಸಾಫೀಸ್ ಯಶಸ್ಸಿಗೆ ಕಾರಣ-ವಾಗಿದ್ದೂ ಎಲ್ಲ ನಿರ್ಮಾಪಕರ ಗಮನದಲ್ಲಿದೆ. ಹಾಗಾಗಿ ಚಿತ್ರ ಸುಮಾರಾಗಿದ್ದರೂ ಒಂದು ಸೂಪರ್‌ಹಿಟ್ ಐಟಂ ಸಾಂಗ್ ಇದ್ದರೆ ಹಣ ದೋಚಬಹುದು ಎನ್ನುವುದು ನಿರ್ಮಾಪಕರ ಲೆಕ್ಕಾಚಾರ. ಬಾಲಿವುಡ್‌ನ ಬಹುತೇಕ ಚಿತ್ರ ನಿರ್ಮಾಪಕರು ಅದಕ್ಕಾಗಿ ಸಂಗೀತ ನಿರ್ದೇಶಕರು ಮತ್ತು ನಿರ್ದೇಶಕರ ಬೆನ್ನು ಹತ್ತಿದ್ದಾರೆ. ಆದರೆ ಒಂದು ವರ್ಷ ಕಳೆದ ಬಳಿಕವೂ ಮುನ್ನಿ.. ಮತ್ತು ಶೀಲಾ.. ಹಾಡುಗಳ ಖದರ್ ಕಡಿಮೆಯಾಗಿಲ್ಲ. ಅವುಗಳ ದಾಖಲೆಯನ್ನು ಮುರಿಯಲು ನಡೆದ ಪ್ರಯತ್ನಗಳೂ ಸಫಲವಾಗಿಲ್ಲ.

ಇಂತಹ ಸಂದರ್ಭದಲ್ಲಿ ಕರೀನಾ ಕಪೂರ್ ಐಟಂ ಸಾಂಗ್‌ಗೆ ‘ನೋ’ ಎಂದಿರುವ ಸುದ್ದಿ ಬಂದಿದೆ. ಅದೂ ಆಪ್ತಮಿತ್ರ, ಮಾರ್ಗದರ್ಶಕ ಎನ್ನಲಾದ ನಿರ್ದೇಶಕ ಕರಣ್ ಜೋಹರ್ ಚಿತ್ರಕ್ಕೆ! ಕರೀನಾ ಮತ್ತು ಕರಣ್ ನಡುವಣ ಗಾಢ ಗೆಳೆತನದ ಬಗ್ಗೆ ತಿಳಿದಿರುವ ಎಲ್ಲರಿಗೂ ಇದೊಂದು ನಂಬಲಾಗದ ಸುದ್ದಿ!

‘ಅಗ್ನಿಪಥ್’ ಚಿತ್ರದಲ್ಲಿ ಒಂದು ಭರ್ಜರಿ ಐಟಂ ಸಾಂಗ್ ಹಾಕಲು ಕರಣ್ ಜೋಹರ್ ನಿರ್ಧರಿಸಿದ ಬಳಿಕ, ಆ ಹಾಡಿಗೆ ಕುಣಿಯುವವರು ಯಾರು.. ಎನ್ನುವ ಪ್ರಶ್ನೆಯೇ ಸಾಕಷ್ಟು ಚರ್ಚೆಗೆ ಒಳಗಾಗಿತ್ತು. ಪ್ರಿಯಾಂಕಾ, ಕರೀನಾ, ರಾಣಿ, ದೀಪಿಕಾ– ಹೀಗೆ ಎಲ್ಲರ ಹೆಸರೂ ಚರ್ಚೆಯಲ್ಲಿತ್ತು. ಆದರೆ ಕರಣ್ ಜೋಹರ್ ಮನಸ್ಸಿಗೆ ಗಟ್ಟಿಯಾದ ಹೆಸರು ಕರೀನಾಳದ್ದು. ಸರಿ, ಕರೀನಾಗೆ ಫೋನ್ ಮಾಡಿದ್ದಾನೆ. ಆದರೆ ಕರೀನಾ ನಯವಾಗಿ, ‘ದಯವಿಟ್ಟು ಬೇಡ.. ನನ್ನಿಂದಾಗಲ್ಲ’ ಎಂದಿದ್ದಾಳೆ! ಕರೀನಾ ಹೀಗೆ ‘ನೋ’ ಅನ್ನೋದಕ್ಕೆ ಕಾರಣಗಳೇನು ಎನ್ನುವುದೀಗ ಬಾಲಿವುಡ್‌ನಲ್ಲಿ ಚರ್ಚೆಯ ವಿಷಯ. ಕೆಲವರ ಪ್ರಕಾರ, ಮುನ್ನಿ ಮತ್ತು ಶೀಲಾ ಹಾಡುಗಳು ಹುಟ್ಟು ಹಾಕಿದಷ್ಟು ಕ್ರೇಝನ್ನು ಇನ್ನೊಂದು ಹಾಡು ಸೃಷ್ಟಿಸುವುದು ಅಷ್ಟು ಸುಲಭವಿಲ್ಲ ಎನ್ನುವುದು ಕರೀನಾಗೆ ಖಚಿತವಾಗಿದೆಯಂತೆ. ಜೊತೆಗೆ ಮಲ್ಲೈಕಾ ಆರೋರಾಳಷ್ಟು ಅಥವಾ ಕತ್ರೀನಾ ಕೈಫ್‌ಳಷ್ಟು ಪ್ರಚೋದಕವಾಗಿ ಕುಣಿಯುವುದೂ ತನ್ನಿಂದ ಸಾಧ್ಯವಿಲ್ಲ ಎನ್ನುವುದು ಆಕೆಯ ಅಭಿಮತವಂತೆ.

ಇನ್ನು ಕೆಲವರ ಪ್ರಕಾರ, ಟಿವಿ ಷೋ ಒಂದರಲ್ಲಿ ಕರಣ್ ಜೋಹರ್ ತನ್ನ ಬಗ್ಗೆ ಮಾಡಿದ ಲಘುವಾದ ಕಾಮೆಂಟುಗಳಿಂದ ಕರೀನಾಗೆ ಬೇಜಾರಾಗಿದೆಯಂತೆ. ಆ ಬಳಿಕ ಅವರಿಬ್ಬರ ನಡುವಣ ಸಂಬಂಧ ಹಳಸಿದೆಯಂತೆ!

ಕರೀನಾಗೆ ಈ ಬಗ್ಗೆ ಪತ್ರಕರ್ತರು ನೇರ ಪ್ರಶ್ನೆ ಹಾಕಿದಾಗ, ಆಕೆ ಪಕ್ಕಾ ರಾಜಕಾರಣಿಯಂತೆ ಉತ್ತರ ನೀಡಿದ್ದಾಳೆ: ‘ಕರಣ್ ನನ್ನ ಒಳ್ಳೆಯ ಮಿತ್ರ. ನನಗೆ ಗೈಡ್ ಇದ್ದ ಹಾಗೆ. ಅವನ ಜತೆ ಜಗಳ ಸಾಧ್ಯವೇ ಇಲ್ಲ’ ಎಂದಿದ್ದಾಳೆ! ಬಲ್ಲ ಮೂಲಗಳ ಪ್ರಕಾರ ವಿಷಯ ಬೇರೆಯೇ ಇದೆಯಂತೆ. ಈ ಹಿಂದೆ ಕರೀನಾ ನಟಿಸಿದ ಕರಣ್ ಜೋಹರ್‌ನ ಎರಡು ಚಿತ್ರಗಳು ಫ್ಲಾಪ್ ಆಗಿವೆ. ಖುರ್ಬಾನ್ ಮತ್ತು ವಿ ಆರ್ ಫ್ಯಾಮಿಲಿ ಎನ್ನುವ ಆ ಚಿತ್ರಗಳ ಸೋಲಿಗೆ ಕರೀನಾಳೆ ಕಾರಣ ಎಂದು ಕರಣ್ ಗೆಳೆಯರ ಬಳಿ ಕಾಮೆಂಟ್ ಮಾಡಿದ್ದನಂತೆ. ಅದಕ್ಕೇ ಕರೀನಾ ಈ ಸಲ ಹುಷಾರಾಗಿ ‘ನೋ’ ಎಂದಿದ್ದಾಳಂತೆ!

ಕರೀನಾ ನಿರಾಕರಣೆಗೆ ಮೇಲಿನ ಎಲ್ಲ ಕಾರಣಗಳೂ ನಿಜ ಇರಬಹುದು.. ಅಲ್ವೆ?

■ ಬಿಂದು